**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರ: 1569/2020**

ಸರ್ಕಾರದ ಪರವಾಗಿ
ಕುಂದಾಪುರ ಸಂಚಾರ ಠಾಣಾ ಪೋಲಿಸರು -- ಪಿರ್ಯಾದಿದಾರರು

-ಮತ್ತು-

ಬಾಬು ನಾಯ್ಕ, 54 ವರ್ಷ,
ತಂದೆ: ದಿ. ಗೋವಿಂದ ನಾಯ್ಕ,
ವಾಸ: ಶ್ರೀನಿಧಿ ನಿಲಯ, ಹರ್ತಟ್ಟು,
ಗಿಳಿಯಾರು, ಕೋಟ,
ಉಡುಪಿ ತಾಲೂಕು. --- ಆರೋಪಿ

**:ಆಪಾದನೆ:**

**ಶ್ರೀಮತಿ ರೋಹಿಣಿ. ಡಿ. ಬಿ.ಎ., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ಆಪಾದನೆ ಏನೆಂದರೆ:**

ದಿನಾಂಕ 26-06-2020 ರಂದು ಬೆಳಿಗ್ಗೆ ಸುಮಾರು 10.45 ಗಂಟೆಗೆ ಆರೋಪಿತರಾದ ನೀವು ಕೆಎ 20 ಕ್ಯೂ 2675 ನೇ ದ್ವಿ ಚಕ್ರ ವಾಹನವನ್ನು ಕುಂದಾಪುರ ಕಡೆಯಿಂದ ತೆಕ್ಕಟ್ಟೆ ಕಡೆಗೆ ಮಾನವನ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಅತೀವೇಗ ಹಾಗೂ ನಿರ್ಲಕ್ಷತನದಿಂದ ಸವಾರಿ ಮಾಡಿಕೊಂಡು ಬಂದು, ಕುಂದಾಪುರ ತಾಲೂಕು, ಕುಂಭಾಶಿ ಗ್ರಾಮದ ಶ್ರೀ ಚಂಡಿಕಾ ದುರ್ಗಾ ಪರಮೇಶ್ವರಿ ದೇವಸ್ಥಾನದ ಹತ್ತಿರ, ನಟರಾಜ್ ರವರ ಕಟ್ಟಿಗೆ ಡಿಪೋ ಎದುರುಗಡೆ ಪೂರ್ವ ಬದಿಯ ಎನ್ ಹೆಚ್ 66 ಡಾಮಾರು ರಸ್ತೆಯಲ್ಲಿ, ಅದೇ ದಿಕ್ಕಿನಲ್ಲಿ ಚಾ.ಸಾ. 1 ರವರು ಸವಾರಿ ಮಾಡಿಕೊಂಡು ಹೋಗುತ್ತಿದ್ದ ಕೆಎ 20 ಡಬ್ಲ್ಯೂ 4131 ನೇ ಬೈಕಿಗೆ ಹಿಂದಿನಿಂದ ಡಿಕ್ಕಿ ಹೊಡೆದು ಆಪಾದಿತರಾದ ನಿಮಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿನಾಂಕ: 26-03-2024

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಕುಂದಾಪುರ**

**ಸಿ.ಸಿ. ಸಂಖ್ಯೆಃ 1569/2020**

**ಫಿರ್ಯಾದುದಾರರುಃ ಸರ್ಕಾರದ ಪರವಾಗಿ** ಕುಂದಾಪುರ ಸಂಚಾರ **ಠಾಣಾ ಪೋಲೀಸರು,**

**- ವಿರುದ್ಧ -**

**ಆರೋಪಿಗಳು ಃ** ಬಾಬು ನಾಯ್ಕ, ತಂದೆಃ ದಿ. ಗೋವಿಂದ ನಾಯ್ಕ,

**1. ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನಾ ಸಾರಾಂಶವನ್ನು ಅರ್ಥಮಾಡಿಕೊಂಡಿರಾ?**

**ಉ.**

**2. ಅಪರಾಧವನ್ನು ಒಪ್ಪಿಕೊಳ್ಳುವಿರಾ ಅಥವಾ ನಿಮ್ಮ ಪರ ಪ್ರತಿರಕ್ಷೆ ಇದೆಯಾ?**

**ಉ.**

**ಮೇಲ್ಕಂಡ ಆಪಾದನಾ ಸಾರಾಂಶವನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

ಹೆಚ್ಚುವರಿ ಸಿವಿಲ್ **ನ್ಯಾಯಾಧೀಶರು ಮತ್ತು,**
**ಜೆಎಂಎಫ್‌ಸಿ.,** ಕುಂದಾಪುರ